ಕರ್ನಾಟಕ ಸರ್ಕಾರ

ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ: ಬಿಟಿಇ/04/ಇಸಿಎಸ್(2)/2022

ಆಯುಕ್ತರವರ ಕಛೇರಿ
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ
ಅರಮನೆ ರಸ್ತೆ, ಬೆಂಗಳೂರು -560001
ದೂರವಾಣಿ ಸಂಖ್ಯೆ:080-2220777
email:dte.commissioner@gmail.com

ದಿನಾಂಕ: 19.10.2022

## SUSPECTED MALPRACTICE (SMP) ಬಗ್ಗೆ ಲಿಖಿತ ಹೇಳಿಕೆ ಮತ್ತು ಸಮಜಾಯಿಷಿ ನೀಡುವ ಬಗ್ಗೆ (ಕಾರಣ ಕೇಳಿ ನೋಟೀಸು)

ವಿಷಯ: ಆಗಸ್ಟ್/ಸೆಪ್ಟೆಂಬರ್ 2022 ರ ಡಿಪ್ಲೋಮಾ ಸೆಮಿಸ್ಟರ್ ಪರೀಕ್ಷೆಯಲ್ಲಿ ವಿದ್ಯಾರ್ಥಿಗಳಿಂದ ಜರುಗಿದ ಮಾಲ್‌ಪ್ರಾಕ್ಟೀಸ್ ಪ್ರಕರಣಗಳು / ವಿದ್ಯಾರ್ಥಿಗಳಿಂದ ಜರುಗಿದ ಲೋಪ ದೋಷ ಪ್ರಕರಣಗಳ ವಿಚಾರಣೆ ನಡೆಸುವ ಕುರಿತು.

********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ತಾಂತ್ರಿಕ ಪರೀಕ್ಷಾ ಮಂಡಳಿಯ ಆಗಸ್ಟ್/ಸೆಪ್ಟೆಂಬರ್ 2022 ರ ಡಿಪ್ಲೋಮ ಸೆಮಿಸ್ಟರ್ ಪರೀಕ್ಷೆಯಲ್ಲಿ ವಿದ್ಯಾರ್ಥಿಗಳು ವಿವಿಧ ಸ್ವರೂಪದ ಮಾಲ್ ಪ್ರಾಕ್ಟೀಸ್ ಪ್ರಕರಣಗಳಲ್ಲಿ ಭಾಗಿಯಾಗಿರುವ/ ಲೋಪ ದೋಷ ಎಸಗಿರುವ ಬಗ್ಗೆ ದೂರುಗಳು ದಾಖಲಾಗಿರುತ್ತವೆ.

1. ಪರೀಕ್ಷಾ ಮಾಲ್‌ಪ್ರಾಕ್ಟೀಸ್ ಮಾಡಿದ ವಿದ್ಯಾರ್ಥಿಗಳ ನೋಂದಣಿ ಸಂಖ್ಯೆ ಹಾಗೂ ಎಸಗಿದ ಮಾಲ್‌ಪ್ರಾಕ್ಟೀಸ್ ನ ಸಂಕ್ಷಿಪ್ತ ಮಾಹಿತಿಯನ್ನು BTELinx ನಲ್ಲಿ ಪ್ರಕಟಿಸಲಾಗಿದೆ. COVID-19 ಹಿನ್ನೆಲೆಯಲ್ಲಿ SMP ವಿದ್ಯಾರ್ಥಿಗಳು ಬೆಂಗಳೂರು ಕೇಂದ್ರ ಕಛೇರಿಗೆ ಬರುವುದನ್ನು ತಪ್ಪಿಸುವ ಸಲುವಾಗಿ ಪ್ರಾಂಶುಪಾಲರುಗಳು ತಮ್ಮ ಸಂಸ್ಥೆಯ ಸಂಬಂಧಪಟ್ಟ ಮಾಲ್‌ಪ್ರಾಕ್ಟೀಸ್ ಮಾಡಿದನೆಂದು ಹೇಳಿರುವ ವಿದ್ಯಾರ್ಥಿಯನ್ನು/ ವಿದ್ಯಾರ್ಥಿಗಳನ್ನು ಸಂಪರ್ಕಿಸಿ ವಿದ್ಯಾರ್ಥಿಯು ಮಾಡಿದ ಮಾಲ್‌ಪ್ರಾಕ್ಟೀಸ್ ಬಗ್ಗೆ ತಿಳಿಹೇಳಿ, ವಿದ್ಯಾರ್ಥಿಯಿಂದ ಲಿಖಿತ ಹೇಳಿಕೆ ಮತ್ತು ಮಾಲ್‌ಪ್ರಾಕ್ಟೀಸ್ ಮಾಡಿರುವ ಬಗ್ಗೆ ಒಪ್ಪಿಗೆ/ ಒಪ್ಪುವುದಿಲ್ಲ ಎಂಬ ಬಗ್ಗೆ, ಮುಚ್ಚಳಿಕೆ ಪಡೆದು ತಮ್ಮ ಸಂಸ್ಥೆಗೆ ಸಂಬಂಧಪಟ್ಟ SMP ವಿದ್ಯಾರ್ಥಿ/ ವಿದ್ಯಾರ್ಥಿಗಳ ಹೇಳಿಕೆಯನ್ನು/ ಹೇಳಿಕೆಗಳನ್ನು, ನೋಂದಣಿ ಅಂಚೆ ಮೂಲಕ ಕಾರ್ಯದರ್ಶಿಯವರು, ತಾಂತ್ರಿಕ ಪರೀಕ್ಷಾ ಮಂಡಳಿ, 5ನೇ ಮಹಡಿ, ತಾಂತ್ರಿಕ ಶಿಕ್ಷಣ ಭವನ, ಬೆಂಗಳೂರು ಇವರಿಗೆ **ದಿನಾಂಕ: 25.10.2022** ರ ಒಳಗೆ ತ್ವರಿತವಾಗಿ ಕಳುಹಿಸುವುದು.

2. ಯಾವುದೇ ಸಂಸ್ಥೆಯ ಯಾವುದೇ ವಿದ್ಯಾರ್ಥಿಯು/ ವಿದ್ಯಾರ್ಥಿಗಳು ನಿಜವಾಗಲೂ SMP ಮಾಡಿಯೂ ಸಹ, ತನ್ನ / ತಮ್ಮಗಳ ತಪ್ಪನ್ನು ಒಪ್ಪಿಕೊಳ್ಳದಿದ್ದ ಪಕ್ಷದಲ್ಲಿ, ಅಂತಹ ವಿದ್ಯಾರ್ಥಿಗಳ ಮತ್ತು ಸಂಬಂಧಪಟ್ಟ ಪರೀಕ್ಷಾ ಅಧಿಕಾರಿಗಳು/ ಸಿಬ್ಬಂದಿಯವರು ತಾಂತ್ರಿಕ ಪರೀಕ್ಷಾ ಮಂಡಳಿಯ ನಿಯಮಾನುಸಾರ ನಿಗದಿಪಡಿಸಲಾಗುವ ದಿನಾಂಕ/ ದಿನಾಂಕಗಳಂದು Malpractice ವಿಚಾರಣೆಯನ್ನು ಎದುರಿಸುವುದು ಅನಿವಾರ್ಯವಾಗುತ್ತದೆ ಎಂಬುದನ್ನು ಈ ಮೂಲಕ ಸಂಬಂಧಪಟ್ಟವರ ಗಮನಕ್ಕೆ ತರಲಾಗಿದೆ.

ಕಾರ್ಯದರ್ಶಿ

ಇವರಿಗೆ,

1. ಸಂಬಂಧಪಟ್ಟ ಪ್ರಿನ್ಸಿಪಾಲರುಗಳಿಗೆ – ಮುಂದಿನ ಕ್ರಮಕ್ಕಾಗಿ
2. ಸಂಬಂಧಪಟ್ಟ ಪರೀಕ್ಷಾ ಕೇಂದ್ರದಲ್ಲಿ ಆಗಸ್ಟ್/ಸೆಪ್ಟೆಂಬರ್ 2022 ರ ಥಿಯರಿ ಪರೀಕ್ಷೆಗಳ ಪರೀಕ್ಷಾ ಮುಖ್ಯ ಅಧೀಕ್ಷಕರು, ಉಪಮುಖ್ಯಅಧೀಕ್ಷಕರು, ಕೊಠಡಿ ಮೇಲ್ವಿಚಾರಕರು, ಇವರುಗಳು ಸಂಬಂಧಪಟ್ಟ ವಿದ್ಯಾರ್ಥಿಯು ಮಾಡಿದ SMPಯ ಬಗ್ಗೆ ಲಿಖಿತ ಹೇಳಿಕೆ ನೀಡುವ ಸಲುವಾಗಿ
3. ಆಗಸ್ಟ್/ಸೆಪ್ಟೆಂಬರ್ 2022 ರ ಪರೀಕ್ಷೆಯಲ್ಲಿ SMP ಮಾಡಿದ ವಿದ್ಯಾರ್ಥಿಗಳ ಗಮನಕ್ಕೆ –ಸಂಸ್ಥೆಯ ಪ್ರಾಂಶುಪಾಲರ ಮುಖಾಂತರ ಸಂಬಂಧಪಟ್ಟ ವಿದ್ಯಾರ್ಥಿಗಳು ಲಿಖಿತ ಹೇಳಿಕೆ/ SMP ಒಪ್ಪುತ್ತೇನೆ/ SMP ಒಪ್ಪುವುದಿಲ್ಲ ಎಂಬ ಮುಚ್ಚಳಿಕೆ ನೀಡುವ ಸಲುವಾಗಿ.

ಪ್ರತಿ:
1) ಇ- ಆಡಳಿತ –ವೆಬ್‌ಸೈಟ್‌ನಲ್ಲಿ ಪ್ರಕಟಿಸಲು
2) ಗಣಕ ಕೇಂದ್ರ – ವೆಬ್‌ಪೋರ್ಟಲ್ ನಲ್ಲಿ ಪ್ರಕಟಿಸಲು
3) ಕಾರ್ಯದರ್ಶಿಯವರ ಆಪ್ತ ಶಾಖೆ
4) ಇಸಿಎಸ್ – ಕಡತಕ್ಕೆ